

# ಹೂ ಚೋರರು!

ಸಾರ್ವಜನಿಕ ಸ್ಥಳದಲ್ಲಿ 'ಕಳ್ಳರಿದ್ದಾರೆ ಎಚ್ಚರಿಕೆ' ಎನ್ನುವ ಫಲಕಗಳು ಸಾಮಾನ್ಯ. ಅದೇ ಮಾದರಿಯಲ್ಲಿ, ಉದ್ಯಾನಗಳಲ್ಲಿ ಹಾಗೂ ಮನೆಯ ಅಂಗಳಗಳಲ್ಲಿ 'ಹೂ ಕಳ್ಳರಿದ್ದಾರೆ, ಎಚ್ಚರಿಕೆ' ಎನ್ನುವ ಫಲಕಗಳನ್ನು ಹಾಕಬೇಕಾದ ಸಂದರ್ಭ ಬಂದಿದೆ. ಈ ಚೋರರ ಸಾಮರ್ಥ್ಯ ಎಂಥದೆಂದರೆ, ಕೆಲವೊಮ್ಮೆ ನಮ್ಮ ಕಣ್ಣೆದುರೇ ಕಳ್ಳತನವಾದರೂ ಸುಮ್ಮನಿರಬೇಕಾಗುತ್ತದೆ.

■ ಲತಾ ಹೆಗಡೆ

ಮಹಿಳೆಯರನ್ನು ಓಲೈಸುವ ಪಂಚಭಾಗ್ಯ ಗ್ಯಾರಂಟಿ ಯೋಜನೆಗಳ ಸಿದ್ಧಸೂತ್ರವಿನ್ನೂ ಸರಿಯಾಗಿ ಜಾರಿಗೆ ಬರದೇ ಪರದಾಡುವ ಹಂತ ತಲುಪಿ ಗೋಜಲಾದದ್ದಕ್ಕೋ ಅಥವಾ ವರುಣದೇವ ಸಕಾಲದಲ್ಲಿ ಸುರಿಯದೇ ಮುನಿಸಿಕೊಂಡದ್ದಕ್ಕೋ – ಒಟ್ಟಿನಲ್ಲಿ ಬೆಲೆ ಗಗನ ಮುಟ್ಟಿ ಜನಸಾಮಾನ್ಯನ ಸ್ಥಿತಿಯೋ ಅತಂತ್ರವಾಗಿ ತ್ರಿಶಂಕುವಿನಂತಾಗಿದೆ. ಏತನ್ಮಧ್ಯೆ ಅಧಿಕ ಶ್ರಾವಣ, ನಿಜ ಶ್ರಾವಣದ ಸಂಭ್ರಮ ಇಣುಕಿದೆ. ಮೂವತ್ತಮೂರು ದಾಸರ ಪದ, ಮೂವತ್ತಮೂರು ವಸ್ತುವನ್ನು ತಾಂಬೂಲದೊಟ್ಟಿಗೆ ಉಡಿ ತುಂಬಿ ಕೃತಾರ್ಥಳಾದದ್ದೂ ಆಗಿದೆ.

ಇನ್ನು ಹಬ್ಬಗಳ ಸರಮಾಲೆಯ ಮಾಸ ನಿಜ ಶ್ರಾವಣಮಾಸವೋ ಗೌರಮ್ಮ, ಲಕ್ಷ್ಮಮ್ಮಂದಿರ ಮಾಸವೂ ಎಂಬುದು ಗೊತ್ತಿದ್ದದ್ದೇ. ಇದೀಗ ಹಬ್ಬದ ಸಂಭ್ರಮದೊಟ್ಟಿಗೆ ಜಾಗೃತಳೂ ಆಗಬೇಕಿದೆ. ಮತ್ತೆ ಮೈಯೆಲ್ಲಾ ಕಣ್ಣಾಗಿಸಿ, ಕಿವಿಯಾಗಿಸಿ ಸಣ್ಣ ಸಪ್ಪಳಕ್ಕೂ ಮಾಡುವ ಕೆಲಸ ಅರ್ಧಕ್ಕೇ ಬಿಟ್ಟು ಕಿಟಕಿಯತ್ತ ಧಾವಿಸಿ ಹಣಕುತ್ತಾ ಕಿಟಕಿ ಕಾಮಾಕ್ಷಮ್ಮಳಾಗಬೇಕಿದೆ. ಅಕಸ್ಮಾತ್ತಾಗಿ ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದ ಅಪರಿಚಿತರಿಗೆ ನಯವಾಗಿಯೇ ಗದರುತ್ತಾ, ಪರಿಚಿತರಿದ್ದಲ್ಲಿ ನೋಡಿಯೂ ನೋಡದಂತೆ ನಟಿಸುವ ದರ್ದಿಗೂ ಹೊಂದಿಕೊಳ್ಳಲೇಬೇಕಿದೆ.

ಇದೇನಿದು, ವಿಷಯ ಪಲ್ಲಟವಾಗುತ್ತಿದೆಯಲ್ಲ, ಇಮಾಂ ಸಾಬಿಗೂ ಗೋಕುಲಾಷ್ಟಮಿಗೂ ಎತ್ತಣಿಂದೆತ್ತ ಸಂಬಂಧವೆಂದು ಮುಂಗಾರು ಮಳೆಯ ಗಣೇಶನಂತೆ ಪರಪರ ತಲೆ ಕೆರೆಯಬೇಡಿ. ವಿವರಿಸುತ್ತೇನೆ, ಸುಶಿಕ್ಷಿತ ಕಳ್ಳರೇ ಈ ಲೇಖನದ ನಾಯಕ ಯಾ ನಾಯಕಿ! ಸರ್ವಕಾಲಕ್ಕೂ ಸಲ್ಲುವ ಇವರದ್ದು ಶ್ರಾವಣ ಮಾಸದಲ್ಲಂತೂ ಅತೀ ಎನ್ನಿಸುವಷ್ಟು ಹಾವಳಿ. ಇಲ್ಲಿ ಹಂಚಿಕೊಂಡಿರುವ ನ ಸ್ವಂತ ಅನುಭವವನ್ನು ಸಹೃದಯಿಗಳಾದ ನೀವು ಸಹನೆಯಿಂದ ಓದಿ ನನ್ನ ಬವಣೆಗೆ ಕನಿಕರಿಸಿ ಲೊಚಗುಟ್ಟಿದರೆ ಸಾರ್ಥಕ ಬದುಕು ನನ್ನದಾಗುತ್ತದೆ. ಹಾಂ! ನೀವಿದಕ್ಕೆ ಖಂಡಿತ ಸ್ಪಂದಿಸುತ್ತೀರೆಂಬ ವಿಶ್ವಾಸವೂ ನನಗಿದೆ. ಕಾರಣ, ಇದು ನಿಮ್ಮ ಅನುಭವವೂ ಹೌದೆಂಬುದನ್ನು ಘಂಟಾಘೋಷವಾಗಿ ಹೇಳಬಲ್ಲೆ.